SRI K. B. SHIVAIAH:-Sir, the statistics given are correct, of course, there were some interruptions. Arrangements are being made to improve the power supply and stop interruptions.

SRI B. B. SAYANAK :-I do not know why the department has given statistics of only January. There is interruption of power supply everyday and every Sunday there is no Electricity between 9-00 A.M. and 5-00 P. M.

SRI K. B. SHIVAIAH: Sir, the present generating capacity is only 950 MW against the demand of 1,250 MW. So, there is shortage of 300 MW. Arrangements are also being made to improve the power supply position to Belgaum City. The matter will be certainly looked into.

MATTER UNDER RULE 312.

(i) *re: Sittings of the Land Tribunals five days a week.*

ಶ್ರಿ ಜೆ. ಎಚ್. ಪಟೀಲ್ (ಚನ್ನಗಿರಿ):—ಮಾನ್ಯ ಅಧ್ಯಕ್ಷರೆ ಮಾನ್ಯ ರೆವಿನ್ಯೂ ಮಂತ್ರಿಗಳು ಮೊನ್ನೆ ದಿವಸ ಒಂದು ಉತ್ತರವನ್ನು ಕೊಟ್ಟಿರುತ್ತಾರೆ. ಅದೇನೆಂದರೆ ಭೂ ನ್ಯಾಯಮಂಡಲಿಗಳು ವಾರಕ್ಕೆ, ಐದು ದಿವಸಕ್ಕೆ ಒಂದುಸಾರಿ ಸೇರಿ ಅವುಗಳು ಹೊಂದಿರತಕ್ಕಂಥ ಕೇಸ್‌ಗಳನ್ನು ಆದಷ್ಟು ಜಾಗ್ರತೆಯಾಗಿ ತೀರ್ಮಾನ ಮಾಡಬೇಕು ಎನ್ನುವ ಬಗ್ಗೆ ಆದೇಶವನ್ನು ಕೊಟ್ಟಿರುತ್ತಾರೆ. ಇದರ ಬಗ್ಗೆ ನನ್ನದೇನು ಅಭ್ಯಂತರವಿಲ್ಲ. ನ್ಯಾಯಮಂಡಲಿಗಳಲ್ಲಿ ಆದಷ್ಟು ಬೇಗ ಕೇಸ್‌ಗಳು ತೀರ್ಮಾನವಾಗಬೇಕು ಎಂಬ ಮಾತನ್ನು ನಾನೂ ಒಪ್ಪುತ್ತೇನೆ. ಭೂಸುಧಾರಣೆ ಕೆಲಸ ಎಷ್ಟು ಬೇಗ ಆದರೆ ಅಷ್ಟು ಒಳ್ಳೆಯದು. ಈಗ ಇಲ್ಲಿ ಬಂದಿರತಕ್ಕ ಸಮಸ್ಯೆ ಏನೆಂದರೆ ನಾವು ಕೂಡ ಅಂದರೆ ಶಾಸಕರೂ ಕೂಡ ಭೂ ನ್ಯಾಯ ಮಂಡಲಿಗಳಲ್ಲಿ ಸದಸ್ಯರಾಗಿರುತ್ತೇವೆ.

೨-೩೦ ಪಿ. ಎಂ.

ವಿಧಾನ ಮಂಡಲದ ಕಾರ್ಯಕಲಾಪಗಳು ನಡೆಯುವ ಹೊತ್ತಿನಲ್ಲಿ ಭೂ ನ್ಯಾಯ ಮಂಡಲಿಗಳ ಸಭೆಗಳೂ ನಡೆದರೆ ನಾವು ಅದಕ್ಕೆ ಪ್ರಾಮುಖ್ಯತೆ ಕೊಡಬೇಕೋ ಅಥವಾ ಇದಕ್ಕೆ ಪ್ರಾಮುಖ್ಯತೆ ಕೊಡಬೇಕೋ ? ನಾವು ಸದನದ ಕಾರ್ಯಕಲಾಪಗಳನ್ನು ಬಿಟ್ಟು ಭೂ ನ್ಯಾಯಮಂಡಲಿಗಳಲ್ಲಿ ಕುಳಿತುಕೊಳ್ಳೋಣವೇ ?ನಾನು ಭೂ ನ್ಯಾಯ ಮಂಡಲಿ ಕಡಿಮೆ, ಶಾಸನ ಸಭೆ ಜಾಸ್ತಿ ಇದಕ್ಕೆ ಹೆಚ್ಚು ಗೌರವವಿದೆ, ಅದಕ್ಕೆ ಕಡಿಮೆ ಗೌರವ ಇದೆ ಎಂಬ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲವೂ ಮುಖ್ಯವೇ ಆದರೆ ನಾವು ಇಂಥ ಸಂದರ್ಭದಲ್ಲಿ ಏನು ಮಾಡಬೇಕು ? ನಾವು ಎಲ್ಲಾದರೂ ಒಂದು ಕಡೆ ಕೆಲಸ ಮಾಡಬೇಕು ಎಂಬುದನ್ನು ತಮ್ಮ ಉದ್ದೇಶವೇ ? ಈಗ ಎಲ್ಲಾ ನ್ಯಾಯಮಂಡಲಿಗಳ ಮುಂದೆಯೂ ಸಮಾನವಾದ ರೀತಿಯಲ್ಲಿ ಕೇಸ್‌ಗಳಿಲ್ಲ. ಕೆಲವು ಕಡೆ ೮ ಸಾವಿರ ಇರಬಹುದು, ಕೆಲವು ಕಡೆ ೩೦೦ ಅಥವಾ ೪೦೦ ಕೇಸ್ ಗಳಿರಬಹುದು. ರೆಗ್ಯುಲರ್ ಸಬ್-ಡಿವಿಷನ್ ಆಫೀಸರ್‌ರವರು ನ್ಯಾಯಮಂಡಲಿಗೆ ಅಧ್ಯಕ್ಷರಾಗಿರುತ್ತಾರೆ. ಒಬ್ಬ ಅಧಿಕಾರಿಗೆ ಹಲವಾರು ಸಮಸ್ಯೆಗಳಿರುತ್ತವೆ. ಅವರು ಆಫೀಸ್ ಕೆಲಸ ಬಿಟ್ಟಿರಬೇಕಾಗುತ್ತದೆ. ಅದ್ದರಿಂದ ಸರ್ಕಾರದವರು ಏನಾದರೂ ಒಂದು ವಾರದಲ್ಲಿ ೫ ದಿವಸ ನ್ಯಾಯಮಂಡಲಿಗಳು ಕುಳಿತು ಕೆಲಸ ಮಾಡಬೇಕೆಂದು ಆಜ್ಞೆ ಮಾಡಿದ್ದಾರೆ ಅದು ವ್ಯಾವಹಾರಿಕವಲ್ಲ. ಆ ರೀತಿ ಮಾಡುವುದು ಕಷ್ಟವಾಗುತ್ತದೆ. ವಿಧಾನ ಸಭಾಧಿವೇಶನ ನಡೆಯುವ ಕಾಲದಲ್ಲಾದರೂ ನ್ಯಾಯಮಂಡಲಿಯ ಸಭೆಗಳನ್ನು ನಡೆಸದಿದ್ದರೆ ನಮಗೆ ಸ್ವಲ್ಪ ಅನುಕೂಲವಾಗುತ್ತದೆ. ಪೂರ್ಣಾವಧಿಗೆ ಅಲ್ಲದಿದ್ದರೂ ಸದನದ ಅಧಿವೇಶನದ ಕಾಲದಲ್ಲಾದರೂ ನ್ಯಾಯ ಮಂಡಲಿಯ ಸಭೆಗಳನ್ನು ಮುಂದೂಡಿದರೆ ಅದರಲ್ಲಿರುವ ಶಾಸಕರಿಗೆ ಅನುಕೂಲವಾಗುತ್ತದೆ. ಈ ತಿಂಗಳು ೧೯ನೇ ತಾರೀಖು ಬಜೆಟ್ ಅಧಿವೇಶನವನ್ನು ಕರೆದಿದ್ದೀರಿ. ಆದರೆ ಆವತ್ತಿನ ದಿನವೇ ನ್ಯಾಯಮಂಡಲಿ ಸಭೆಗೂ ಬರಬೇಕೆಂದು ನನಗೆ ನೋಟೀಸ್ ಕಳುಹಿಸಿದ್ದಾರೆ. ನಾನು ಎಲ್ಲಿಗೆ ಹೋಗ

ಬೇಕಂ. ಇದು ಭೂ ನ್ಯಾಯಮಂಡಲಿಗಳಲ್ಲಿರತಕ್ಕ ಎಲ್ಲ ಸದಸ್ಯರಿಗೂ ಇರತಕ್ಕ ಒಂದು ಸಮಸ್ಯೆ. ನಾವು ಭೂ ನ್ಯಾಯಮಂಡಲಿಗಳನ್ನು ಕಡೆಗಣಿಸಿ ಇಲ್ಲಿಗೆ ಬರಬೇಕು. ಎಂದು ಹೇಳುವುದಿಲ್ಲ. ಆ ಸಭೆಗೆ ಹೋಗ ಬೇಕಾದ ಅವಶ್ಯಕತೆಯೂ ಇದೆ. ಇಲ್ಲಿಗೆ ಬರಬೇಕಾದ ಅಗತ್ಯವೂ ಇದೆ, ಇಂಥ ಸಂದರ್ಭದಲ್ಲಿ ನಮಗೆ ಸ್ವಲ್ಪ ಕಷ್ಟವಾಗುತ್ತದೆ. ನಮ್ಮ ವಿರೋಧಪಕ್ಷದ ಸದಸ್ಯರಿಗೆ ಭೂ ನ್ಯಾಯಮಂಡಲಿಗಳಲ್ಲಿ ಹೆಚ್ಚು ಅವಕಾಶಗಳಿಲ್ಲ. ಹಿಂದೆ ಮಾನ್ಯ ಮಂತ್ರಿಗಳು ವಿರೋಧಪಕ್ಷದ ಪ್ರತಿನಿಧಿಗಳನ್ನು ಎಲ್ಲಾ ಭೂ ನ್ಯಾಯ ಮಂಡಲಿಗಳಲ್ಲಿ ಹಾಕುವುದಾಗಿ ಆಶ್ವಾಸನೆ ಕೊಟ್ಟಿದ್ದರು. ಆದರೆ ಆ ಬಗ್ಗೆ ನಾನು ಪ್ರಸ್ತಾಪ ಮಾಡು ವುದಕ್ಕೆ ಹೋಗುವುದಿಲ್ಲ. ಎಲ್ಲೋ ಕೆಲವು ಮಂಡಲಿಗಳಲ್ಲಿ ವಿರೋಧಪಕ್ಷದ ಸದಸ್ಯರಿಗೆ ಅವಕಾಶ ಇದೆ. ಇಂಥಾದ್ದರಲ್ಲಿ ನಾವು ಕೆಲವರಾದರೂ ಅದರಲ್ಲಿಲ್ಲದೇ ಹೋದರೆ ಅದು ನ್ಯಾಯಮಂಡಲಿಯಾಗುವುದಿಲ್ಲ. ನಾವಿದ್ದರೂ ಎಷ್ಟೋ ಅನ್ಯಾಯಗಳಾಗುತ್ತವೆ. ಹೀಗಿರುವಾಗ ನಾವು ಇಲ್ಲದೇ ಹೋದರೆ ಅಲ್ಲಿ ನ್ಯಾಯ ವಾಗಿ ಕೆಲಸಕಾರ್ಯಗಳು ಆಗುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ವಿಚಾರ ಮಾಡಿ ನಮ್ಮ ಕಷ್ಟವನ್ನು ಪರಿಹಾರ ಮಾಡಬೇಕು. ಭೂ ನ್ಯಾಯಮಂಡಲಿಗಳಲ್ಲಿ ೮ ಸಾವಿರ ೯ ಸಾವಿರ ಅರ್ಜಿಗಳಿವೆ ನಿಜ. ಅದು ಆದಷ್ಟು ಬೇಗ ತೀರ್ಮಾನವಾಗಬೇಕು ಎಂಬುದನ್ನು ನಾವು ಒಪ್ಪುತ್ತೇವೆ. ಆದರೆ ಸದನ ನಡೆಯುವ ವೇಳೆಯಲ್ಲಿ ಭೂ ನ್ಯಾಯಮಂಡಲಿಯ ಸಭೆಗಳೂ ನಡೆದರೆ ನಾವು ಈ ಸದನಕ್ಕೆ ಗೌರವ ಕೊಡೋಣವೋ ಅಥವಾ ನ್ಯಾಯಮಂಡಲಿಗೆ ಗೌರವ ಕೊಡೋಣವೋ ?

ಶ್ರೀ ಸಿ. ಎ. ಚಂದ್ರೇಗೌಡ:—ಮಾನ್ಯ ಸದಸ್ಯರು ಮಾತನಾಡುವಾಗ ವಿರೋಧಪಕ್ಷದವರು ಭೂ ನ್ಯಾಯಮಂಡಲಿಗಳಲ್ಲಿ ಇಲ್ಲದೇ ಇದ್ದರೆ ನ್ಯಾಯ ಸಿಗುವುದಿಲ್ಲ ಎಂಬ ಅರ್ಥ ಬರುವಂತೆ ಹೇಳಿದ್ದಾರೆ. ಆದರೆ.....

ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ):—ಮಾನ್ಯ ಮಿತ್ರರು ತಪ್ಪಾಗಿ ತಿಳಿದುಕೊಂಡಿ ದ್ದಾರೆ. ಜೆ. ಎಚ್. ಪಟೇಲ್ ಅವರು ಹೇಳಿದ ಅರ್ಥ ಏನೆಂದರೆ ಶಾಸಕರುಗಳು ನ್ಯಾಯಮಂಡಲಿಗಳಲ್ಲಿ ಹಾಜರಿಲ್ಲದಿದ್ದರೆ ಪರಿಣಾಮ ಒಳ್ಳೆಯದಾಗುವುದಿಲ್ಲ, ಶಾಸಕರು ಹಾಜರಿದ್ದರೆ ಪರಿಣಾಮ ಒಳ್ಳೆಯದಾಗು ತ್ತದೆ ಎಂದು. ಇದರಲ್ಲಿ ಆ ಪಕ್ಷ, ಈ ಪಕ್ಷ ಎಂಬ ಬೇಧಭಾವವೇನೂ ಇಲ್ಲ. ಯಾರೇ ಆಗಲಿ ಶಾಸಕರು ಇಲ್ಲದಿದ್ದರೆ ಸರಿಹೋಗುವುದಿಲ್ಲ ಎಂದು ಅವರು ಹೇಳಿದ್ದಾರೆ ಈ ಪ್ರಶ್ನೆಯನ್ನು ಮಾನ್ಯ ಪಟೇಲ್ ಅವರು ಎತ್ತುವುದಕ್ಕಿಂತ ಆಡಳಿತ ಪಕ್ಷದ ಸದಸ್ಯರೇ ಎತ್ತಬೇಕಾಗಿತ್ತು. ಏಕೆಂದರೆ ಆ ಕಡೆಯವರೇ ಈ ಮಂಡಲಿಗಳಲ್ಲಿ ಹೆಚ್ಚಾಗಿರುವುದು, ನಮ್ಮವರು ಅಲ್ಲಿ ಇಲ್ಲಿ ಒಂದೊಂದು ಕಡೆ ಇದ್ದಾರೆ. ಮಾನ್ಯ ಪಟೇಲರು ಹೇಳಿದ ಹಾಗೆ ಎಲ್ಲಾ ಕಡೆಗಳಲ್ಲೂ ಕೇಸ್‌ಗಳು ಹೆಚ್ಚಾಗಿಲ್ಲ, ಕೆಲವು ಕಡೆ ಕಡಿಮೆ ಕೇಸ್‌ಗಳೂ ಇವೆ. ಅಂಥ ಕೆಲವು ಕಡೆಗಳಲ್ಲಿ ಸದಸ್ಯರಿಗೆ ಅನುಕೂಲತೆಗಳನ್ನು ಮಾಡಿಕೊಡಲಿ. ಶಾಸನಸಭೆ ಅಧಿವೇಶನ ನಡೆಯುವಾಗ ಆ ಅವಧಿಯಲ್ಲಿ ಮಾತ್ರ ನಿಯಮವನ್ನು ಸ್ವಲ್ಪ ಸಡಿಲಿಸಿ ಸದಸ್ಯರಿಗೆ ಅವಕಾಶ ಮಾಡಿಕೊಡುವುದಕ್ಕೆ ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳಬೇಕು ಭೂ ನ್ಯಾಯಮಂಡಲಿಗಳಲ್ಲಿ ಶಾಸಕರು ಇರಬೇಕಾದ ಅವಶ್ಯಕತೆ ಇದೆ. ಅಲ್ಲಿ ಹಾಜರಿರಬೇಕಾದ ಕರ್ತವ್ಯವೂ ಅವರದಾಗಿರುತ್ತದೆ. ಇದು ಅಲ್ಲಿನ ಜನರ ಅಭಿಪ್ರಾಯವೂ ಹೌದು. ಇಲ್ಲದಿದ್ದರೆ ಅದರ ಪರಿಣಾಮ ಪ್ರತಿಕೂಲವಾಗುವ ಸಂಭವವಿರುತ್ತದೆ. ಆದ್ದರಿಂದ ದಯವಿಟ್ಟು ಶಾಸನಸಭೆಗಳು ನಡೆಯುವಾಗಲಾದರೂ ಭೂ ನ್ಯಾಯಮಂಡಲಿಗಳು ಕುಳಿತುಕೊಳ್ಳಬೇಕಾದ ಅವಧಿಯ ಬಗ್ಗೆ ಇರತಕ್ಕ ನಿಯಮವನ್ನು ಸಡಿಲಿಸಬೇಕು. ಮೊದಲು ಯಾವರೀತಿ ಇತ್ತೋ ಅದೇ ರೀತಿ ಆಗುವ ಹಾಗೆ ವ್ಯವಸ್ಥೆ ಮಾಡಿದರೆ ಶಾಸಕರಿಗೆ ಅನುಕೂಲವಾಗುತ್ತದೆ.

† ಶ್ರೀ ಬಿ. ಬಸವಲಿಂಗಪ್ಪ (ಕಂದಾಯ ಶಾಖೆಯ ಮಂತ್ರಿಗಳು):—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿರತಕ್ಕ ಪ್ರಶ್ನೆಯಲ್ಲಿ ನನ್ನದೇನೂ ಭಿನ್ನಾಭಿಪ್ರಾಯವಿಲ್ಲ. ಟ್ರಿಬ್ಯುನಲ್‌ನಲ್ಲಿ ಇರುವ ೪ ಜನದಲ್ಲಿ ಒಬ್ಬರು ಗೈರುಹಾಜರಾದರೂ ಕೂಡ ೩ ಜನ ಇದ್ದುಕೊಂಡು ಕೆಲಸ ಮಾಡುವುದಕ್ಕೆ ಅವಕಾಶ ಉಂಟು. ನಮ್ಮ ಶಾಸಕರು ಅದರಲ್ಲಿ ಇರಬೇಕು. ಇವರ ಹಾಜರಿ ಅಲ್ಲಿ ಮುಖ್ಯ ಎಂಬ ವಾದವನ್ನು ನಾನೂ ಒಪ್ಪುತ್ತೇನೆ, ಅದರಲ್ಲಿ ನನ್ನ ಭಿನ್ನಾಭಿಪ್ರಾಯ ಇಲ್ಲ. ಆದರೆ ಒಂದು ವೇಳೆ ಇವರು ಇಲ್ಲದೇ ಇದ್ದರೂ ತಪ್ಪೇನೂ ಆಗುವುದಿಲ್ಲ. ವ್ಯವಹಾರ ನಡೆಯುತ್ತದೆ. ಇನ್ನು ಮಿಕ್ಕ ಸದಸ್ಯರು ಕುಳಿತುಕೊಂಡು ಕೆಲಸವನ್ನು ನಡೆಸಿಕೊಂಡು ಹೋಗಬಹುದು. ಶಾಸನಸಭಾ ಸದಸ್ಯರು ಅನೇಕ ಸಮಿತಿ ಗಳಲ್ಲಿ ಸದಸ್ಯರಾಗಿರುತ್ತಾರೆ. ಅದೇ ರೀತಿ ಅಲ್ಲಿಯೂ ಆಗಿರುತ್ತಾರೆ. ಒಂದು ವೇಳೆ ಇವರಿಗೆ ಭೂ ನ್ಯಾಯಮಂಡಲಿಗಳಿಗೆ ಹಾಜರಾಗುವುದು ಕಷ್ಟವಾದರೆ ಅವರ ಪರವಾಗಿ ಬೇರೆ ಯಾರಾದರೂ ಅವರ

ಪ್ರತಿನಿಧಿಗಳನ್ನು ನಾನು ಹಾಕುವುದಕ್ಕೆ ತಯಾರಾಗಿದ್ದೇನೆ. ಭೂ ಸುಧಾರಣೆ ಕೆಲಸ ಅತಿ ಶೀಘ್ರವಾಗಿ ಆಗಬೇಕಾದ ಅವಶ್ಯಕತೆ ಇದೆ. ನಾವು ಏನು ಕಾನೂನನ್ನು ಮಾಡಿದ್ದೇವೆ ಅದು ಪರಿಪೂರ್ಣವಾಗಿ ಕಾರ್ಯಗತವಾಗಬೇಕು. ಅದರ ಸಾಧನೆ ಆಗಬೇಕು. ಎಂಬ ನಿಲುವನ್ನು ಸರ್ಕಾರ ತಾಳಿದೆ. ಇದರ ಹಿನ್ನೆಲೆಯಲ್ಲಿಯೇ ವಿಶೇಷ ಅಸಿಸ್ಟೆಂಟ್ ಕಮಿಷನರ್ ಜೊತೆಗೆ ರೆಗ್ಯುಲರ್ ಅಸಿಸ್ಟೆಂಟ್ ಕಮಿಷನರ್ ಅವರಿಗೂ ಈಗ ಈ ಬಗ್ಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಈ ಬಗ್ಗೆ ನಿರ್ದೇಶನ ನೀಡಿದ್ದೇವೆ ಅದರ ಪ್ರಕಾರ ಎಲ್ಲಾ ಅಸಿಸ್ಟೆಂಟ್ ಕಮಿಷನರ್ ಅವರು ಭೂ ಸುಧಾರಣೆ ಜಾರಿ ಮಾಡುವ ಕೆಲಸವನ್ನು ಮಾಡುತ್ತಿದ್ದಾರೆ. ಭೂ ಸುಧಾರಣೆ ಕೆಲಸ ಚೆನ್ನಾಗಿ ನಡೆಯಬೇಕೆಂದು ಮಾನ್ಯ ವಿರೋಧಪಕ್ಷದವರೂ ಹೇಳುತ್ತೀರಿ. ಈ ರೀತಿ ತಮ್ಮ ಅಭಿಪ್ರಾಯವೂ ಇರುವಾಗ ಶಾಸನಸಭೆ ನಡೆಯುವ ವೇಳೆಯಲ್ಲಿ ಎರಡು ಮೂರು ತಿಂಗಳು ಮುಂದಕ್ಕೆ ಹಾಕಿ ಎಂದು ಹೇಳುವುದು. ನನ್ನ ಅಭಿಪ್ರಾಯದಲ್ಲಿ ಒಂದು ರೀತಿಯಿಂದ ಅಷ್ಟು ಸರಿಯಲ್ಲ. ಆದರೆ ಶಾಸಕರಿಗೆ ಅಲ್ಲಿ ಹಾಜರಾಗಲು ಸಾಧ್ಯವಾಗದಿದ್ದರೆ ಅವರು ಯಾರನ್ನು ಹೇಳುತ್ತಾರೋ ಅವರನ್ನು ಅವರು ಪ್ರತಿನಿಧಿಯಾಗಿ ಅಲ್ಲಿ ಹಾಕುವುದಕ್ಕೆ ನಾನು ತಯಾರಿದ್ದೇನೆ. ನಾಳೆಯೇ ಬೇಕಾದರೆ ನೇಮಕ ಮಾಡುತ್ತೇನೆ.

ಶ್ರೀ ಜೆ. ಎಚ್. ಪಟೀಲ್:—ಆಗಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಬಸವಲಿಂಗಪ್ಪನವರು ಹೇಳುವ ತೀವ್ರತೆಯನ್ನು ನಾನೂ ಒಪ್ಪುತ್ತೇನೆ. ಕೆಲವು ಕಡೆಗಳಲ್ಲಿ ಅಡಳಿತ ಪಕ್ಷದ ಶಾಸಕರು ಪ್ರಬಲವಾಗಿರುವವರು ಇಲ್ಲದೇಹೋದರೆ ಕೆಲವು ಕೇಸ್‌ಗಳನ್ನು ತೆಗೆದುಕೊಳ್ಳುವುದೇ ಇಲ್ಲ. ಅದನ್ನು ಮುಂದಕ್ಕೆ ಹಾಕುತ್ತಾರೆ. ಆ ಬಗ್ಗೆ ನಿರ್ದಿಷ್ಟವಾಗಿ ಪತ್ರ ಬರೆಯಬೇಕೆಂದರೆ ನಾನು ಬರೆಯುತ್ತೇನೆ, ಅಥವಾ ಹೇಳಿ ಎಂದರೆ ಹೇಳುತ್ತೇನೆ. ಅಧಿಕಾರಿಗಳೇ ಭಟ್ಟಂಗಿಗಳಾದರೆ ಟ್ರಿಬ್ಯೂನಲ್‌ನಲ್ಲಿ ನ್ಯಾಯ ಸಿಗುವುದಿಲ್ಲ. ದಯಮಾಡಿ ಮಾನ್ಯ ಮಂತ್ರಿಗಳು ಅಧಿಕಾರಿಗಳಿಗೆ ತಿಳಿಸಬೇಕು, ಎಂ.ಎಲ್.ಎ. ಗಳನ್ನು ಇರಲಿ, ಇಲ್ಲದೇ ಇರಲಿ ಇಚ್ಛೆಬಂದಹಾಗೆ ಕೇಸ್‌ಗಳನ್ನು ನಡೆಸಕೂಡದು ಎಂದು ನಿರ್ದೇಶನ ಕೊಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರಾದ ದೇವೇಗೌಡರು ಹೇಳುವ ಮಾತಿನಲ್ಲಿ ಭಿನ್ನಾಭಿಪ್ರಾಯವೇನೂ ಇಲ್ಲ. ಇತ್ತೀಚೆಗೆ ನಾನು ಹೈದರಾಬಾದ್ ಕರ್ನಾಟಕ ಮತ್ತು ಬಾಂಬೆ ಕರ್ನಾಟಕ ಭಾಗಗಳಲ್ಲಿ ಪ್ರವಾಸ ಕೈಗೊಂಡಿದ್ದೆ. ಎಲ್ಲೇ ನೋಡಿ ಟ್ರಿಬ್ಯೂನಲ್‌ಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದನ್ನು ಮನವರಿಕೆ ಮಾಡಿಕೊಂಡಿದ್ದೇನೆ. ಅವರು ಹೇಳುವ ಮಾತಿನಲ್ಲೆ ಅರ್ಥವೂ ಇದೆ, ಅದು ಸಾಧ್ಯವೂ ಇದೆ. ಆದ್ದರಿಂದ ನಾವು ಅಧಿಕಾರಿಗಳಿಗೆ ಕಟ್ಟುನಿಟ್ಟಾದ ನಿರ್ದೇಶನವನ್ನು ನೀಡಿ ಕಾನೂನು ಪ್ರಕಾರ ಇರತಕ್ಕ ರುಜುವಾತುಗಳನ್ನು ನೋಡಿ ದಯಾದಾಕ್ಷಿಣ್ಯಗಳಿಲ್ಲದೆ ಕೇಸ್‌ಗಳನ್ನು ತೀರ್ಮಾನ ಮಾಡಬೇಕು ಎಂದು ತಿಳಿಸಿದ್ದೇನೆ. ಪ್ರತ್ಯಕ್ಷವಾಗಿಯೂ ಹೇಳಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಗೇಣಿದಾರನಿಗೆ ರಕ್ಷಣೆ ಕೊಡಬೇಕು ಎಂದು ನಾನು ಹೇಳಿದಾಗ ಅವರಿಗೆ ರಕ್ಷಣೆ ಕೊಡಬೇಕೆಂದು ಮಾನ್ಯ ಮಂತ್ರಿಗಳು ನಿರ್ದೇಶನ ನೀಡಿದರೆ ಅದನ್ನು ಹರಿದುಹಾಕಿದ ಪ್ರಸಂಗ ನಡೆದಿದೆ.

If you are really interested to help the tenants, this kind of political interference must be curbed. ಅದು ಇಲ್ಲದೆ ನೀವು ರಾಜಕೀಯ ಮಾಡುವುದಾದರೆ ಮಾಡಿಕೊಳ್ಳಿ. ತಾವು ನೋಡಿಕೊಳ್ಳುತ್ತೇವೆ. ನಾವು ನಿಮ್ಮ ಹತ್ತಿರ ಈ ವಿಚಾರವನ್ನು ತಿಳಿಸಿದಾಗ ತಾವು ನಿರ್ದೇಶನ ಕೊಟ್ಟಿರಿ. ದುರ್ದೈವವಶಾತ್ ತಾವು ಕೊಟ್ಟಂತಹ ನಿರ್ದೇಶನ ಜಾರಿಗೆ ಬರಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ,—ಸರ್ಕಾರದ ನಿರ್ದೇಶನಕ್ಕೆ ಅಧಿಕಾರಿಗಳು ಮಾನ್ಯತೆ ಕೊಟ್ಟಿಲ್ಲ ಎಂಬುದಾಗಿ ಮಾನ್ಯ ಶ್ರೀ ದೇವೇಗೌಡರು ಹೇಳಿದ್ದಾರೆ. ಅಂತಹ ನಿದರ್ಶನವನ್ನು ದಯಮಾಡಿ ನನಗೆ ಕೊಡಿ. ಯಾವ ಅಧಿಕಾರಿಗಳು ಸರಕಾರದ ನಿರ್ದೇಶನವನ್ನು ಗಮನಿಸದೇ ಅಸಭ್ಯ ರೀತಿಯಲ್ಲಿ ವರ್ತನೆ ಮಾಡುತ್ತಾರೋ ಅಂತಹವರ ಮೇಲೆ ನಾವು ಕಾನೂನು ಬದ್ಧವಾಗಿ ಶಿಸ್ತಿನ ಕ್ರಮವನ್ನು ಇವತ್ತೇ ಅಥವಾ ನಾಳೆಯೇ ತೆಗೆದುಕೊಳ್ಳುತ್ತೇನೆ. ಅದರಲ್ಲಿ ಭಿನ್ನಾಭಿಪ್ರಾಯ ಬೇಕಾಗಿಲ್ಲ. ಮತ್ತೆ ನನಗೆ ತಿಳಿದ ಮಟ್ಟಿಗೆ ಸರ್ಕಾರದ ನಿರ್ದೇಶನವನ್ನು ಅಷ್ಟು ಲಘುವಾಗಿ ತಿಳಿದುಕೊಂಡು ನಡೆದುಕೊಳ್ಳುತ್ತಾರೆಂಬುದೂ ಇದು

ವರೆಗೆ ನನಗಂತೂ ತಿಳುವಳಿಕೆಗೆ ಬಂದಿಲ್ಲ. ಇಂತಹ ಎಂದೆರಡು ಇರಬಹುದು. ಸರ್ಕಾರದ ಆದೇಶವನ್ನು ಲಘುವಾಗಿ ತಿಳಿದುಕೊಂಡಂತಹವರಿಗೆ ಅವರ ಮೇಲೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ.

PAPERS LAID ON THE TABLE :

i) SRI B. BASAVALINGAPPA (Minister for Revenue). — I beg to lay:—

1. Notification No. RD 22 LGP 78 dated 4th August, 1978 The Karnataka Land Grant (First Amendment) Rules, 1978
2. Notification No. RD 703 LGP 77 dated 18th September 1978 The Karnataka Land Grant (Second Amendment) Rules, 1979 under section 198 of the Karnataka Land Revenue Act, 1964.
3. Notification No. RD 187 LGP 75 (P) dated 23rd February, 1979.

   (The Karnataka Scheduled Castes and Scheduled Tribes (Prohibition of Transfer of Certain Lands) Rules, 1979 under section 10 (2) of the Karnataka Seheduled Castes and Scheduled Tribes (Prohibition of Transfer of Certain Lands) Act, 1978.

ii) SRI S. M. YAHYA (Minister for Finance).—I beg to lay :—

1. Notification No FD 170 CEX 77, dated 26th February, 1979 Consequential amendment to Notification No. FD 170 CEX 77 dated 22nd February, 1979.
2. Notification No. FD 170 CEX 77, dated 26th February, 1979. The Karnataka Entertainments Tax (First Amendment) Rules, 1979·

   under section 18 (4) of the Karnataka Entertainments Tax Act, 1958.

iii) SRI S,B. ANGARAPPA [on behalf of SRI H. C. SRIKANTAIAH (Ministe for Municipal Administration)] to lay:—

   Notification No. HUD 20 MEL 79. dated 7th March 1979. Continuance of Supersession period to Town Municipal Council, Karkala.

   under section 316 (5) of the Karnataka Municipalities Act, 1964.

iv) SRI S BANGARAPPA [on behalf of Sri K. H. SRINIVASA (Minister of State for Information and Youth Services)] Sir, I beg to lay :

1. Order No. HD 227 CNA 78 dated 13th March, 1979.